## ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:10-09-2015ರ ನಡವಳಿಗಳು

**ವಿಷಯದ ಸಂಖ್ಯೆ : 181 / 2015-16**

ವಿಷಯ: **ಕೆನ್ಸಿಂಗ್‌ಟನ್ ಪಾರ್ಕ್ ಈಜುಕೊಳದ ಪಕ್ಕದಲ್ಲಿನ 50927 ಚದರ ಅಡಿ (4733 ಚದರ ಮೀಟರ್) ಜಾಗದ ಪ್ರದೇಶವನ್ನು ಗುತ್ತಿಗೆಗೆ ನೀಡುವ ಬಗ್ಗೆ.**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:90, ಹಲಸೂರು ವ್ಯಾಪ್ತಿಯಲ್ಲಿ ಬರುವ ಹಲಸೂರು ಕೆರೆಯ ಪೂರ್ವ ದಂಡೆಯಲ್ಲಿರುವ ಕೆನ್ಸಿಂಗ್‌ಟನ್ ಪಾರ್ಕ್ ಈಜುಕೊಳದ ಪಕ್ಕದಲ್ಲಿನ 42,675 ಚದರ ಅಡಿ (3965 ಚದರ ಮೀಟರ್) ಜಾಗವನ್ನು ಸೇನಾಪಡೆ ತರಬೇತಿಗಾಗಿ ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್‌ಗೆ ಈಗಾಗಲೇ ಗುತ್ತಿಗೆಗೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆಯನ್ನು ನವೀಕರಿಸಲು ಕಡತವನ್ನು ಪ್ರತ್ಯೇಕವಾಗಿ ಮಂಡಿಸಲಾಗಿರುತ್ತದೆ.

ಮುಂದುವರೆದಂತೆ, ಬೈಯಪ್ಪನಹಳ್ಳಿಯಲ್ಲಿ ನಿರ್ಮಿಸುತ್ತಿರುವ ROBಗೆ ಬೇಕಾದ 107503 ಚದರ ಅಡಿ (9991 ಚದರ ಮೀಟರ್) ಜಾಗದ ಬದಲಾಗಿ ಹಲಸೂರು ಕೆನ್ಸಿಂಗ್‌ಟನ್ ಪಾರ್ಕ್ ಈಜುಕೊಳದ ಪಕ್ಕದ ಪ್ರದೇಶಕ್ಕೆ ಹೊಂದಿಕೊಂಡಿರುವ 50927 ಚದರ ಅಡಿ (4733 ಚದರ ಮೀಟರ್) ಜಾಗದ ಪ್ರದೇಶವನ್ನು ಸೇನಾಪಡೆ ತರಬೇತಿಗಾಗಿ ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್‌ಗೆ ಗುತ್ತಿಗೆಗೆ ನೀಡಲು ಕೋರಿರುತ್ತಾರೆ.

ಸದರಿ ಸ್ವತ್ತಿನ ಸ್ಥಳ ಪರಿಶೀಲನೆ ಪ್ರಕಾರ ಈ ಪ್ರದೇಶವು ಹಾಲಿ ಗುತ್ತಿಗೆಗೆ ನೀಡಿರುವ 42,675 ಚದರ ಅಡಿ (3965 ಚದರ ಮೀಟರ್) ಜಾಗಕ್ಕೆ ಹೊಂದಿಕೊಂಡಿರುವ ಪಕ್ಕದ 50927 ಚದರ ಅಡಿ (4733 ಚದರ ಮೀಟರ್) ಜಾಗದ ಪ್ರದೇಶವಾಗಿದ್ದು, ಈ ಜಾಗವನ್ನು ಬೈಯಪ್ಪನಹಳ್ಳಿಯಲ್ಲಿ ನಿರ್ಮಿಸುತ್ತಿರುವ ROBಗೆ ಬೇಕಾದ 107503 ಚದರ ಅಡಿ (9991 ಚದರ ಮೀಟರ್) ಜಾಗದ ಬದಲಾಗಿ ನೀಡಲು ಕೋರಿರುವುದರಿಂದ, ಈ ಪ್ರದೇಶವನ್ನು ಎಂ.ಇ.ಜಿ (ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್) ಮತ್ತು ಸೆಂಟರ್ ರವರಿಗೆ ಸೇನಾ ತರಬೇತಿ ಕಾರ್ಯಕ್ರಮವನ್ನು ನಡೆಸಲು (ಹಾಲಿ Guidance Value ಮಾರುಕಟ್ಟೆ ದರ ಚದರ ಅಡಿಗೆ ರೂ.8,800/- ಗಳಾಗಿದ್ದು, 50927 ಚದರ ಅಡಿಗಳಿಗೆ ರೂ.44,81,57,600/- ಗಳಾಗುತ್ತದೆ. ಇದರಲ್ಲಿ ಶೇ.10% ರಂತೆ ಲೆಕ್ಕಾ ಮಾಡಲಾಗಿ ರೂ.4,48,15,760/- ಗಳಾಗುತ್ತದೆ) ವರ್ಷಕ್ಕೆ ರೂ.4,48,15,760/- ಗಳಂತೆ 5 ವರ್ಷಗಳಿಗೆ ಗುತ್ತಿಗೆಯನ್ನು ನೀಡಬಹುದಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಹಾಲಿ ಗುತ್ತಿಗೆಗೆ ನೀಡಿರುವ (42,675 ಚದರ ಅಡಿ, 3965 ಚದರ ಮೀಟರ್ ಜಾಗದ ಪಕ್ಕದಲ್ಲಿನ 50927 ಚದರ ಅಡಿ, (4733 ಚದರ ಮೀಟರ್) ಜಾಗದ ಪ್ರದೇಶವನ್ನು ಎಂ.ಇ.ಜಿ. (ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್) ಮತ್ತು ಸಎಂಟರ್‌ರವರಿಗೆ ಗುತ್ತಿಗೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:31-08-2015ರ ಟಿಪ್ಪಣಿ.

**ತೀರ್ಮಾನ: "ವ್ಯತ್ಯಾಸದ ಮೊತ್ತವನ್ನು ಮುಂದೆ ಸೇನಾಪಡೆಯಿಂದ ಪಡೆಯಬೇಕಾದ ಜಮೀನಿನ ಮೌಲ್ಯಕ್ಕೆ ಸರಿದೂಗಿಸುವ ಷರತ್ತಿನ ಮೇಲೆ ಗುತ್ತಿಗೆ ಅವಧಿ ನವೀಕರಣ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗೆ ಕಳುಹಿಸಲು ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು